
# ನಿಜವಾದ ಮಗಳು




ಇಸ್ಲಾಂ ಧರ್ಮದ ಪ್ರವಾದಿ ಹಜರತ್ ಮಹಮ್ಮದರು ತಮ್ಮ ಮಗಳು ಫಾತಿಮಾಳ ಮನೆಗೆ ಒಮ್ಮೆ ಆತುರದಿಂದ ಬರುತ್ತಿದ್ದರು. ಬಾಗಿಲಲ್ಲೇ ಅವಳನ್ನು ಕಂಡರು. ಫಾತಿಮಾ ಕೈತುಂಬ ಬೆಳ್ಳಿಯ ಬಳೆಗಳನ್ನು ತೊಟ್ಟಿದ್ದಳು. ಬಾಗಿಲಿಗೆ ಕೆಂಪುರಂಗಿನ ಪರದೆ ಹಾಕಿದ್ದಳು. ಮನೆ ತುಂಬ ಸಿಂಗಾರ ಅಲಂಕಾರಗಳು ಬೇರೆ. ಪ್ರವಾದಿಗಳು ಬಾಗಿಲನ್ನು ಕಂಡೊಡನೆ ಹಿಂತಿರುಗಿ ನಡೆದುಬಿಟ್ಟರು. ಒಂದು ಮಸೀದಿಯೊಳಗೆ ಹೋಗಿ ಬೇಸರದಿಂದ ಕುಸಿದರು. ದುಃಖದಲ್ಲಿ ಮುಳುಗಿದರು. ಮಹಮ್ಮದರನ್ನು ಕರೆತರಲು ಫಾತಿಮಾಳು ತನ್ನ ಮಗನನ್ನು ಕಳುಹಿಸಿದಳು. ಅದಕ್ಕೆ ಅವನ ತಾತ ಹೀಗೆಂದರು : " ತುಣುಕು ರೊಟ್ಟಿಯೂ ಸಿಗದೆ ಜನರು ದುಃಖಿಸುತ್ತಿರುವುದನ್ನು ನೀನು ನೋಡಿಲ್ಲವೇನು?" ಹೀಗಿರುವಾಗ ನನ್ನ ಮಗಳು, ರಂಗಿನ ಪರದೆಯ ಹಿಂದೆ ವೈಭೋಗದಲ್ಲಿ ಮೆರೆಯುವುದನ್ನು ಕಂಡು ನನಗೆ ತುಂಬ ನಾಚಿಕೆಯಾಗಿಬಿಟ್ಟಿತು. ಅದಕ್ಕೆಂದೇ, ಅದನ್ನು ನಾನು ಸಹಿಸದೆ ಓಡಿಬಂದೆ." ಅದನ್ನು ಕೇಳಿ ಅವರ ಮೊಮ್ಮಗನು ಮನೆಗೆ ಓಡಿಹೋಗಿ ಒಂದು ಗಂಟನ್ನು ಹೊತ್ತು ತಂದ. ಅದರಲ್ಲಿ ರಂಗಿನ ಪರದೆಗಳು, ತಾಯಿ ಫಾತಿಮಾಳ ಬೆಳ್ಳಿ ಬಳೆಗಳು ಎಲ್ಲವೂ ಇದ್ದವು. ಹಜರತ್ ಮಹಮ್ಮದರು ಅದನ್ನೆಲ್ಲ ಮಾರಿಬಿಟ್ಟು, ಆ ಹಣದಿಂದ ಬಡಜನರಿಗೆ ರೊಟ್ಟಿ ಹಂಚಿದರು. ಅನಂತರ ಸಂತಸದಿಂದ ಫಾತಿಮಾಳ ಮನೆಗೆ ಬಂದು ಹೀಗೆಂದರು "ಇದು ನನ್ನ ಮಗಳ ಮನೆ , ಇವಳೇ ನನ್ನ ನಿಜವಾದ ಮಗಳು."